ಉಪಾಧ್ಯಕ್ಷರು :– ಕೆಲವರ ಬಿಹೇವಿಯರ್ ಮಾತನಾಡುವಾಗ ಸರಿಯಾಗಿ ಇರುವುದಿಲ್ಲ, ಅಂಥವರು ಯಾರು ಎಂದು ನಾನು ಆಮೇಲೆ ಹೇಳುತ್ತೇನೆ. ಈಗ ಮಲ್ಲಿಕಾರ್ಜುನ ಸಿದ್ದರಾಮಪ್ಪನವರ ಪ್ರಶ್ನೆ. ಅವರು ಈಗ ಇಲ್ಲಿ ಇಲ್ಲ. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು ಮಾನ್ಯ ಸಿಂಧ್ಯಾರವರು ಹೇಳಬೇಕು.

ಶ್ರೀ ಆರ್. ಅಶೋಕ್ :– ಮಾನ್ಯ ಉಪಾಧ್ಯಕ್ಷರೆ, ಲಿಖಿತ ಮೂಲಕ ಉತ್ತರ ಕೊಟ್ಟಿರುವುದರಲ್ಲಿ ಅಧಿಕಾರಿಗಳು ತಪ್ಪು ಮಾಹಿತಿ ಕೊಟ್ಟಿದ್ದಾರೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ :– ಮಾನ್ಯ ಉಪಾಧ್ಯಕ್ಷರೆ, ನಾನು ಇನ್ನೂ ಲಿಖಿತ ಮೂಲಕ ಉತ್ತರಿಸುವ ಪಟ್ಟಿಯನ್ನು ಸಭೆಯಲ್ಲಿ ಮಂಡನೆಯನ್ನೇ ಮಾಡಿಲ್ಲ. ಈಗ ಮಂಡಿಸುತ್ತೇನೆ.

ಉಪಾಧ್ಯಕ್ಷರು :– ಮಂಡಿಸಿ.

(ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಕೈಗಾರಿಕಾ ಸಚಿವರು) :– ಮಾನ್ಯ ಉಪಾಧ್ಯಕ್ಷರೆ, ದಿನಾಂಕ 21–07–2005 ರ 35 ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 62 ಪ್ರಶ್ನೆಗಳ ಪೈಕಿ 43 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತೇನೆ.

(ಅನುಬಂಧ – I)

7. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

(ಅ) ವಿಷಯ:– ಲಿಖಿತ ಉತ್ತರದಲ್ಲಿ ಅಧಿಕಾರಿಗಳು ತಪ್ಪು ಮಾಹಿತಿ ನೀಡಿರುವ ಬಗ್ಗೆ.

ಶ್ರೀ ಆರ್. ಅಶೋಕ್ :– ಮಾನ್ಯ ಉಪಾಧ್ಯಕ್ಷರೆ, ಲಿಖಿತ ಉತ್ತರಗಳನ್ನು ನಮಗೆ ಕೊಟ್ಟಿದ್ದಾರೆ. ಅಧಿಕಾರಿಗಳು ತಪ್ಪು ತಪ್ಪು ಹೇಳಿಕೆಗಳನ್ನು ಕೊಟ್ಟು ನಮ್ಮ ಸದನಕ್ಕೆ ಅಗೌರವವನ್ನು ಮಾಡಿದ್ದಾರೆ.

ಉಪಾಧ್ಯಕ್ಷರು :– ಓದಿ, ಓದಿ, ಅದೇನು ಹೇಳಿ.

ಶ್ರೀ ಆರ್. ಅಶೋಕ್ :– ಒಂದು ನಿಮಿಷ, ಓದುತ್ತೇನೆ ಅದನ್ನು ಮಾನ್ಯ ಉಪಾಧ್ಯಕ್ಷರೆ, ಕೇಳಿಸಿಕೊಳ್ಳಿ. ನೆ. ಲ. ನರೇಂದ್ರಬಾಬುರವರ ಪ್ರಶ್ನೆ ಇದು. ಬೆಂಗಳೂರಿನಲ್ಲಿ ಎಷ್ಟು ಲೈವ್ ಬ್ಯಾಂಡ್ ಹಾಗೂ ಬಾರ್ ಬ್ಯಾಂಡ್ ಸ್ಥಳ ಇದೆ. ಅಧಿಕೃತ, ಅನಧಿಕೃತ, ವಿವರಿಸಿ ಎಂದು ಕೇಳಿದ್ದಾರೆ. ಅದಕ್ಕೆ ಉತ್ತರ ಕೊಟ್ಟಿರುವುದನ್ನು ತಾವು ದಯವಿಟ್ಟು ಗಮನಿಸಿ. ಬೆಂಗಳೂರು ನಗರದಲ್ಲಿ 51 ಲೈವ್‌ಬ್ಯಾಂಡ್ ಕೇಂದ್ರಗಳು ಇರುತ್ತವೆ. ಇದು ಉತ್ತರ. ಅದರ ಕೆಳಗಡೆ ಇನ್ನೊಂದು ಸುತ್ತು ಉತ್ತರ ಕೊಟ್ಟಿದಾರೆ, ಹಾಲಿ ಬೆಂಗಳೂರು ನಗರದಲ್ಲಿ ಯಾವುದೇ ಲೈವ್‌ಬ್ಯಾಂಡ್, ಬಾರ್ ಡಾನ್ಸ್ ನಡೆಯುತ್ತಿಲ್ಲ. ಇದೇನು ಸಾರ್ ಉತ್ತರ? ನಮ್ಮನ್ನೇನು ಮಾಡುವುದಕ್ಕೆ ಬಂದಿದ್ದಾರೆ. ಅಧಿಕಾರಿಗಳ ಬೇಜವಾಬ್ದಾರಿಯಲ್ಲವೇ ಸಾರ್ ಇದು. ಮುಖ್ಯಮಂತ್ರಿಗಳ ಖಾತೆಗೆ ಬರುವುದು ಇದು ಸಾರ್ ಅಧಿಕಾರಿಗಳು ಸಹಿ ಮಾಡಿದ್ದಾರೆ. ಏನಿದು, ಅವರೇನು ಉತ್ತರ ಕೊಟ್ಟರು ನಾವು ತೆಗೆದುಕೊಂಡು ಹೋಗಬೇಕೆ? ಇದೇನಿದು, ಯಾರದ್ದು ತಪ್ಪು ಸಾರ್ ಇದರಲ್ಲಿ?

ಉಪಾಧ್ಯಕ್ಷರು :– ಈಗ ಇದು ಚುಕ್ಕೆರಹಿತ ಪ್ರಶ್ನೆಯಾಗಿದೆ. ನೀವು ಬೇಕಾದರೆ ಇದರ ಮೇಲೆ ಅರ್ಧ ಗಂಟೆ ಚರ್ಚೆಗೆ ಕೇಳಿ. ಅಶೋಕ್‌ರವರೇ, ನೀವು ಬೇಕಾದರೆ ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ಕೇಳಿ. ಬೇಕಾದರೆ ಕೊಡೋಣ.

ಶ್ರೀ ಆರ್. ಅಶೋಕ್ :– ಮಾನ್ಯ ಉಪಾಧ್ಯಕ್ಷರೆ, ಸ್ಟಾರ್ಡ್ ಪ್ರಶ್ನೆ ಆಗುವುದು ಒಂದಿಪ್ಪತ್ತು ಮಾತ್ರ. ಉಳಿದವುಗಳೆಲ್ಲವೂ ಅನ್‌ಸ್ಟಾರ್ಡ್ ಆಗುತ್ತದೆ.

ಶ್ರಿ ಜೆ. ಸಿ. ಮಾಧುಸ್ವಾಮಿ :– ಅನ್‌ಸ್ಟಾರ್ಡ್ ಕೂಡ ಡಾಕ್ಯುಮೆಂಟೇ ಆಗಿದೆ. ಅನ್‌ಸ್ಟಾರ್ಡ್ ಕ್ವೆಶ್ಚನ್‌ಗಳಿಗೆ ಬಂದಿರುವ ಉತ್ತರವನ್ನೇ ಇನ್‌ಫರ್ಮೇಶನ್ ಫ್ರಂ ಗೌವರ್ನ್‌ಮೆಂಟ್ ಎಂದು ತಿಳಿದುಕೊಂಡೇ ನಾವೆಲ್ಲರು ಇಲ್ಲಿ ಮಾತನಾಡುತ್ತೇವೆ. ಪ್ರಶ್ನೆ ಹಾಕುವುದೇ ನಾವು ಮಾಹಿತಿ ಪಡೆಯಲೆಂದೇ ಅನ್‌ಸ್ಟಾರ್ಡ್ ಕ್ವೆಶ್ಚನ್ ಕೂಡ ಅಧಿಕೃತವೇ ಆಗಿದೆ. ಈ ರೀತಿ ಉತ್ತರ ಕೊಡುವುದಾದರೆ ನಾವೇಕೆ ಪ್ರಶ್ನೆ ಹಾಕಬೇಕು?

ಶ್ರಿ ಪಿ. ಜಿ. ಆರ್. ಸಿಂಧ್ಯಾ (ಕೈಗಾರಿಕಾ ಸಚಿವರು) :– ಮಾನ್ಯ ಉಪಾಧ್ಯಕ್ಷರೆ, ಈ ರೀತಿ ಮಾಡೋಣ. ಮಾನ್ಯ ಅಶೋಕ್‌ರವರು,

ಉಪಾಧ್ಯಕ್ಷರು :– ಈಗ ಒಂದರ್ಧ ಗಂಟೆ ಚರ್ಚೆಗೆ ಬೇಕಾದರೆ ಅವಕಾಶ ಕೊಡ್ತೇನೆ. ಮಾತನಾಡಿ. ಇದರ ಬಗ್ಗೆ ಚರ್ಚೆ ಮಾಡಿ.

ಶ್ರೀ ಆರ್. ಅಶೋಕ್ :– ನೋಡಿ ಉಪಾಧ್ಯಕ್ಷರೆ, ಇವೊತ್ತಿನ ಸಂಜೆವಾಣಿ ಪತ್ರಿಕೆಯಲ್ಲಿ,

ಉಪಾಧ್ಯಕ್ಷರು :– ಒಂದು ನಿಮಿಷ ಅಶೋಕ್‌ರವರೆ, ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ ಕೇಳಿ.

ಶ್ರಿ ಪಿ. ಜಿ. ಆರ್. ಸಿಂಧ್ಯಾ (ಕೈಗಾರಿಕಾ ಸಚಿವರು) :– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಅಶೋಕ್‌ರವರು ಕೇಳಿರತಕ್ಕಂಥ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಗಳ ಪರವಾಗಿ ರಂಗಮಣಿ ಎನ್ನತಕ್ಕಂಥ ಒಳಾಡಳಿತ ಮತ್ತು ಸಾರಿಗೆ ಇಲಾಖೆಯ ಅಧಿಕಾರಿಗಳು ಸಹಿಯನ್ನು ಹಾಕಿ ಮುಖ್ಯಮಂತ್ರಿಗಳ ಒಪ್ಪಿಗೆಯನ್ನು ಪಡೆದಿದ್ದಾರೆ.

ಬೆಂಗಳೂರಿನಲ್ಲಿ 51 ಲೈವ್‌ಬ್ಯಾಂಡ್ ಕೇಂದ್ರಗಳಿವೆ ಎಂದು ಹೇಳಿದ್ದಾರೆ. ಬಾರ್ ಡ್ಯಾನ್ಸ್ ಸ್ಥಳಗಳು ಎಂದು ಡಿವೈಡ್ ಮಾಡಿಕೊಂಡು ಹಾಲಿ ಬೆಂಗಳೂರಿನಲ್ಲಿ ಯಾವುದೇ ಲೈವ್ ಬ್ಯಾಂಡ್ ಬಾರ್ ಡ್ಯಾನ್ಸ್ ನಡೆಯುವುದಿಲ್ಲವೆಂದು ಹೇಳಿದ್ದೀರಿ. ಇದರಿಂದ ಇದು ತಪ್ಪು ಉತ್ತರ ಎಂದು ಹೇಳುತ್ತಿದ್ದೀರಿ, ಆದುದರಿಂದ ಅರ್ಧ ಗಂಟೆ ಚರ್ಚೆಗೆ ಇದನ್ನು ಅವಕಾಶ ಮಾಡಿಕೊಡಿ. ಇದನ್ನು ಚರ್ಚೆ ಮಾಡೋಣ, ಇದು ಯಾವುದು ಎಂದು ನೋಡಿ, ನಾನು ಚೀಫ್ ಮಿನಿಸ್ಟರ್ ಪರವಾಗಿ ಉತ್ತರ ಕೊಡುತ್ತೇನೆ.

ಉಪಾಧ್ಯಕ್ಷರು :– ಅಶೋಕ್‌ರವರೆ, ತಾವು ಚರ್ಚೆ ಮಾಡಿ, ಅರ್ಧ ಗಂಟೆ ಟೈಂ ಕೊಡುತ್ತೇವೆ. ತಾವು ಅದಕ್ಕೆ ಒಂದು ನೋಟೀಸ್ ಕೊಡಿ. ಅದಕ್ಕೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇವೆ.

ಶ್ರೀ ಜೆ. ಸಿ. ಮಾಧುಸ್ವಾಮಿ :– ತಾವೇ ಕನ್‌ವರ್ಟ್ ಮಾಡಿ ಸರ್.

ಶ್ರೀ ಆರ್. ಅಶೋಕ್ :– ಮಾನ್ಯ ಉಪಾಧ್ಯಕ್ಷರೆ, ಅಧಿಕಾರಿಗಳು ಬೇಜವಾಬ್ದಾರಿಯಿಂದ ಮನಸೋ ಇಚ್ಛೆ ಏನು ಬೇಕಾದರೂ ಬರೆದು ವಿಧಾನಸಭೆಗೆ ಕೊಡಬಹುದು, ಯಾರೂ ಇದನ್ನು ನೋಡುವುದಿಲ್ಲ, ಓದುವುದಿಲ್ಲ ಅಂದು ಕೊಟ್ಟರೆ, ಅದು ತಪ್ಪಲ್ಲವೇ?

(ಗೊಂದಲ)

ಉಪಾಧ್ಯಕ್ಷರು :– ಅದನ್ನು ಮಂಗಳವಾರಕ್ಕೆ ಡಿಸ್‌ಕಷನ್‌ಗೆ ತೆಗೆದುಕೊಳ್ಳೋಣ. ತಾವು ಅರ್ಧ ಗಂಟೆ ಚರ್ಚೆ ಮಾಡಿ.

ಶ್ರೀ ಆರ್. ಅಶೋಕ್ :– ಅಧಿಕಾರಿಗಳು ಓದಬೇಕು ಅದನ್ನು, ಓದಿಬಿಟ್ಟು ಸದನಕ್ಕೆ ಕಳುಹಿಸಬೇಕು. ಹಾಗೆ ಸೈನ್ ಮಾಡಿ ಕೊಟ್ಟರೆ ಅದಕ್ಕೆ ಗೌರವ ಎನು?

ಶ್ರೀ ಅರಗ ಜ್ಞಾನೇಂದ್ರ :– ಮಾನ್ಯ ಮುಖ್ಯಮಂತ್ರಿಗಳ ಒಪ್ಪಿಗೆ ಪಡೆದಿದ್ದಾರಲ್ಲಾ, ಅದು ಹೇಳಿ. ಹಣಿಬರಹ. ಏನು ಅರ್ಥ ಇದೆಯಾ ಈ ರೀತಿ ಉತ್ತರ ಕೊಟ್ಟರೆ...

ಉಪಾಧ್ಯಕ್ಷರು :– ಈಗ ಗಮನ ಸೆಳೆಯುವ ಸೂಚನೆಗಳು, ಅದಕ್ಕಿಂತ ಮುಂಚಿತವಾಗಿ.. ರವಿಯವರೆ, ಕುಳಿತುಕೊಳ್ಳಿ.

ಶ್ರೀ ಸಿ. ಟಿ. ರವಿ :– ಮಾನ್ಯ ಉಪಾಧ್ಯಕ್ಷರೆ, ಭೂಮಾಪಕರು ಕಳೆದ ಐದು ದಿನದಿಂದ ಧರಣಿ ಕುಳಿತಿದ್ದಾರೆ, ಅವರು ನಿಮ್ಮ ಹತ್ತಿರ ಎಲ್ಲಾ ಬಂದು ಕೇಳಿಕೊಂಡಿದ್ದಾರೆ.

ಉಪಾಧ್ಯಕ್ಷರು :– ರವಿ, ಆಮೇಲೆ ಮಾತನಾಡಿ. ವಾಟಾಳ್ ರವರೆ, ತಾವು ಎರಡು ನಿಮಿಷದಲ್ಲಿ ಮುಗಿಸುತ್ತೀರಾ?

(ಆ) ವಿಷಯ:– ಕಾವೇರಿ ನೀರು ಬಿಡಲು ತಮಿಳುನಾಡಿನಲ್ಲಿ ಮುಖ್ಯಮಂತ್ರಿ ಜಯಲಲಿತಾ ಅವರ ನಾಯಕತ್ವದಲ್ಲಿನ ಕೇಂದ್ರದ ಮೇಲೆ ಒತ್ತಡ ತರುತ್ತಿರುವುದರ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) :– ಮುಗಿಸುತ್ತೇನೆ. ಕಾವೇರಿ ನೀರಿನ ಬಗ್ಗೆ ಹೇಳುವುದಾದರೆ, ನಮಗೆ ಕೃಷ್ಣರಾಜ ಸಾಗರದಲ್ಲಿ ನಮಗೆಲ್ಲ ನೀರಿಲ್ಲ. ನಾವು ನಿಜವಾಗಲೂ ಬಹಳ ತೊಂದರೆಯಲ್ಲಿದ್ದೇವೆ. ಕರ್ನಾಟಕದ ರೈತರು ಅತ್ಯಂತ ಘೋರ ಪರಿಸ್ಥಿತಿಯಲ್ಲಿದ್ದಾರೆ. ದುಸ್ಥಿತಿಯಲ್ಲಿದ್ದಾರೆ, ಗಂಬೀರವಾದ ಪರಿಸ್ಥಿತಿ ಇದೆ, ನಮಗೆ ನೀರಿಲ್ಲ. ಇಂತಹ ಪರಿಸ್ಥಿತಿಯಲ್ಲಿ ನೀರನ್ನು ಬಿಡಲೇಬೇಕೆಂದು ಹೇಳಿ, ಕೇಂದ್ರದ ಮೇಲೆ ಒತ್ತಡ ಹೇರುವುದಕ್ಕೆ ಭಾರೀ ಪ್ರಮಾಣದಲ್ಲಿ ನಾಳೆ ಇಡೀ ತಮಿಳುನಾಡಿನಾದ್ಯಂತ ಎಐಎಡಿಎಂಕೆ ಯವರು ಅಲ್ಲಿನ ಮುಖ್ಯಮಂತ್ರಿ ಜಯಲಲಿತಾ ನಾಯಕತ್ವದಲ್ಲಿ ಇಡೀ ರಾಜ್ಯಾದ್ಯಂತ ಕೇಂದ್ರ ಸರ್ಕಾರದ ಕಾರ್ಯಾಲಯದ ಮುಂದೆ ಚಳುವಳಿ ಮಾಡುತ್ತಿದ್ದಾರೆ, ಹೋರಾಟ ಮಾಡುತ್ತಿದ್ದಾರೆ. ಕೇಂದ್ರದ ಮೇಲೆ ಒತ್ತಡ ತರುತ್ತಿದ್ದಾರೆ. ಈ ಒತ್ತಡ ಅಲ್ಲದೆ, ಅಲ್ಲಿ ಪ್ರಾಧಿಕಾರದ ಸಭೆ ಕರೆಯಬೇಕೆಂದು ಹೇಳುತ್ತಿದ್ದಾರೆ. ಇದು ಅತ್ಯಂತ ಅಪಾಯಕಾರಿ ಬೆಳವಣಿಗೆ. ಕರ್ನಾಟಕದಲ್ಲೂ ಅವರು ಗಂಭೀರವಾಗಿ ಇರಬೇಕೇ ಹೊರತು, ಉದ್ದೇಶಪೂರ್ವಕವಾಗಿ, ಶಾಂತವಾಗಿರತಕ್ಕಂಥ ಕರ್ನಾಟಕದಲ್ಲಿ ಅಶಾಂತ ವಾತಾವರಣವನ್ನು ತರುವುದಕ್ಕೆ ಜಯಲಲಿತ ರವರೇ ಕಾರಣಕರ್ತರಾಗುತ್ತಿದ್ದಾರೆ. ನಾನು ಅವರಿಗೆ ಹೇಳುತ್ತಿದ್ದೇನೆ, ಇದು ಒಳ್ಳೆಯ ಸೂಚನೆ ಅಲ್ಲ, ನೀವು ಉದ್ದೇಶಪೂರ್ವಕವಾಗಿ ರಾಜಕೀಯ ಮಾಡುತ್ತಿದ್ದೀರಿ. ನಿಮ್ಮ ರಾಜಕೀಯ–ಕ್ಕೋಸ್ಕರಕ್ಕಾಗಿ ಕಾವೇರಿ ವಿಚಾರವನ್ನು ತಮಿಳುನಾಡಿನಾದ್ಯಂತ ನಾಳೆ ಚಳುವಳಿಗೆ ಹೊರಟಿರತಕ್ಕಂಥಾದ್ದು, ಸರಿಯಾದ ನೀತಿ ಅಲ್ಲ. ಚಳುವಳಿ ಮಾಡಿ ಮಾನ್ಯ ಪ್ರಧಾನ ಮಂತ್ರಿಯವರಿಗೆ ಒತ್ತಡ ತರುತ್ತಿದ್ದಾರೆ. ರಾಷ್ಟ್ರಪತಿ ಅವರ ಮೇಲೆ ಒತ್ತಡ ತರುತ್ತಿದ್ದಾರೆ. ಕರ್ನಾಟಕದಲ್ಲಿ ನೀರು ಇಲ್ಲದೆ ಇದ್ದರೂ ನೀರು ಕೊಡಿ ಎಂದು ಒತ್ತಡ ತರುತ್ತಿದ್ದಾರೆ. ಈಗಾಗಲೇ ಕಬಿನಿ ಜಲಾಶಯದಿಂದ ಯದ್ವಾತದ್ವಾ ನೀರು ಹೋಗುತ್ತಿದೆ. ಅದರ ಬಗ್ಗೆ ಅವರು ಮಾತನಾಡುತ್ತಿಲ್ಲ. ಅದು ಕೃಷ್ಣರಾಜ ಸಾಗರದಿಂದ ನೀರು ಕೊಡಬೇಕೆಂದು ಇರುವುದು. ನಾವು ಒಂದು ಹನಿ ನೀರನ್ನೂ ಕೊಡುವಂತಹ ಪರಿಸ್ಥಿತಿ ಈಗ ಇಲ್ಲ. ಆದುದರಿಂದ ಅವರೇನು ನಾಳೆ ಚಳುವಳಿ ಮಾಡುತ್ತಿದ್ದಾರೆ, ಅದನ್ನು ಕೈಬಿಡಬೇಕು. ಆ ಚಳುವಳಿಯನ್ನು ಕೈಬಿಡಲಿಲ್ಲವೆಂದರೆ, ನಾವು ಕರ್ನಾಟಕಾದ್ಯಂತ ಹೋರಾಟ ಮಾಡಬೇಕಾಗುತ್ತದೆ. ಕರ್ನಾಟಕ ಬಂದ್ ಮಾಡಬೇಕಾಗುತ್ತದೆ. ತಮಿಳುನಾಡು ವಿರುದ್ಧ ಹೋರಾಟ ಮಾಡಬೇಕಾಗುತ್ತದೆ ಎಂಬ ಎಚ್ಚರಿಕೆಯನ್ನು ಕೊಡುತ್ತಿದ್ದೇವೆ. ಸರ್ಕಾರ ಈ ಬಗ್ಗೆ ಬಹಳ ಮೌನವಾಗಿದ್ದೀರಿ, ಇದರ ಬಗ್ಗೆ ಏನಾದರೂ ಹೇಳಿಕೆ ಕೊಡುವುದಿದ್ದರೆ ಕೊಡಬಹುದು.